ದೀಪಟಿಗೆ

ವಾರಪತ್ರಿಕೆ ಸಂಪಾದಕ: ಸುರಿಮನೆ ನಾಗರಾಜ

ಖಾಸಗಿ ಪ್ರಸಾರಕ್ಕಾಗಿ ಕೊಪ್ಪ ೨೫-೭-೮೨ ಭಾನುವಾರ ೨೫

'ದೀಪಟಿಗೆ' ಹೆಸರು ಬದಲಾವಣೆ

ನಾವು ಕೇಳಿದ್ದ 'ದೀಪಟಿಗೆ' ಹೆಸರು ಸಿಕ್ಕಿಲ್ಲ. ಬದಲಾಗಿ 'ಮುಂಜಾವು' ಎಂಬ ಹೆಸರು ಮಂಜೂರಾಗಿದೆ. ಹೊಸ ಹೆಸರಿನಿಂದ ಪತ್ರಿಕೆ ಪ್ರಕಟವಾಗುವ ತಾರೀಕನ್ನು ಸದ್ಯದಲ್ಲೇ ಪ್ರಕಟಿಸುತ್ತೇವೆ.

ಮುಂಜಾವು ಚಂದಾ ದರ

ಬಿಡಿ ಪ್ರತಿ	೪೦ ಪೈಸೆ.
ವಾರ್ಷಿಕ ಚಂದಾ	೨೦ ರೂಪಾಯಿ
ಅಜೀವ ಚಂದಾ	೨೦೦ ರೂಪಾಯಿ.

ಜುಲೈ ೨೬ ರಿಂದ ಕೊಪ್ಪದ

ಕಿರಿಯ ಕಾಲೇಜು ವಿದ್ಯಾರ್ಥಿಗಳ ನಿರಶನ

ಕೊಪ್ಪ: ಕೊರತೆಗಳ ಕಂತೆಯಾಗಿರುವ ಇಲ್ಲಿನ ಕಿರಿಯ ಕಾಲೇಜಿನ ವಿದ್ಯಾರ್ಥಿಗಳ ಬೇಡಿಕೆಗಳು ಈಡೇರಿಲ್ಲದಿರುವುದರಿಂದ ಅವರು ಕೊಟ್ಟ ಗಡುವಿನಂತೆ ಜುಲೈ ೨೬ರ ಸೋಮವಾರದಿಂದ ಬಿರುಸಿನ ಚಳುವಳಿಗೆ ತೊಡಗುತ್ತಿದ್ದಾರೆ.

ತಮ್ಮ ಸಮಸ್ಯೆಗಳ ಕಡೆ ಊರಿನ ನಾಗರಿಕರ ಹಾಗೂ ಶಿಕ್ಷಣ ಇಲಾಖೆಯ ಗಮನ ಸೆಳೆಯಲು ವಿದ್ಯಾರ್ಥಿ ಕ್ರಿಯಾ ಸಮಿತಿ ರೂಪಿಸಿರುವ ಕಾರ್ಯಕ್ರಮದಂತೆ ಮೊದಲು ಮೂರು ದಿನ ಉಪವಾಸ ಸತ್ಯಾಗ್ರಹ ಮತ್ತು ಮೆರವಣಿಗೆ. ಅಷ್ಟರಲ್ಲಿ ಪ್ರಯೋಜನವಾಗದಿದ್ದರೆ ೨೯ ಮತ್ತು ೩೦ರಂದು ತಾಲ್ಲೂಕು ಕಚೇರಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿ ಕಚೇರಿ ಪಿಕೆಟಿಂಗ್. ಅದೂ ಫಲ ಕೊಡದಿದ್ದರೆ ಅನಿರ್ದಿಷ್ಟ ಕಾಲ ತರಗತಿಗಳಿಗೆ ಬಹಿಷ್ಕಾರ

ಖಾಲಿಯಾಗುತ್ತಿರುವ ವಿದ್ಯಾರ್ಥಿಗಳು

ವಿಜ್ಞಾನ ವಿಭಾಗದಲ್ಲಿದ್ದ ಬಹುತೇಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾಲೇಜು ಬಿಟ್ಟು ಬೇರೆ ಕಾಲೇಜುಗಳಿಗೆ ಹೋಗುತ್ತಿದ್ದು ಇನ್ನು ಕೆಲವೇ ಹುಡುಗರು ಉಳಿದಿದ್ದಾರೆಂದು ಹೇಳಲಾಗಿದೆ.

ಚಿದಂಬರ್ ಹೇಳಿಕೆ

ಸಮಸ್ಯೆಯ ಬಗ್ಗೆ ಸಂಬಂಧಪಟ್ಟವರಿಗೆಲ್ಲ ತಾವು ತಿಳಿಸಿದ್ದಾಗಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ. ಜಿ. ಚಿದಂಬರ್ ತಿಳಿಸಿದ್ದಾರೆ. ಬೇಗಾನೆ ರಾಮಯ್ಯನವರೂ ಸಹ ಇನ್ನೊಂದು ವಾರದಲ್ಲಿ ಸಮಸ್ಯೆಗೆ ಪರಿಹಾರ ದೊರಕಿಸುವುದಾಗಿಯೂ, ಚಳುವಳಿಗೆ ಇಳಿಯದಂತೆ ವಿದ್ಯಾರ್ಥಿಗಳ ಮನವೊಲಿಸುವಂತೆಯೂ ಚಿದಂಬರ್ ರವರಿಗೆ ಸೂಚಿಸಿರುವುದಾಗಿ ನಂಬಲರ್ಹವಾಗಿ ಗೊತ್ತಾಗಿದೆ. ಆದರೆ ಭರವಸೆಗಳಿಂದೆಲ್ಲ ಭ್ರಮನಿರಸನ ಹೊಂದಿರುವ ವಿದ್ಯಾರ್ಥಿಗಳು ಈ ಆಶ್ವಾಸನೆಯನ್ನು ನಂಬುವ ಸ್ಥಿತಿಯಲ್ಲಿಲ್ಲವೆನ್ನಲಾಗಿದೆ.

ಸಮಸ್ಯೆಗಳ ಪರಿಹಾರಕ್ಕೆ [illegible] ದುಡಿಯುವುದರಿಂದ ಆ ವಿದ್ಯಾರ್ಥಿಗಳನ್ನು ಕ್ರಿಯಾಸಮಿತಿ ಚಳುವಳಿಗೆ ಸಜ್ಜುಗೊಳಿಸಿದೆ. ಇಡೀ ವಿದ್ಯಾರ್ಥಿ ಸಮೂಹ ಕುದಿಯುತ್ತಿದ್ದು, ಚಳುವಳಿ ಬಿರುಸಾಗುವ ಸ್ಪಷ್ಟ ಸೂಚನೆಗಳು ಕಾಣುತ್ತಿವೆ.

ಜಿಲ್ಲೆಗೆ ಪ್ರತ್ಯೇಕ ವೃತ್ತಿ ತೆರಿಗೆ ಕಚೇರಿ

ಚಿಕ್ಕಮಗಳೂರು: ಜಿಲ್ಲೆಗೆ ಪ್ರತ್ಯೇಕ ವೃತ್ತಿ ತೆರಿಗೆ ಕಚೇರಿ ತೆರೆಯಲಾಗಿದ್ದು, ಅದರ ವಿಳಾಸ ಹೀಗಿದೆ: ಸಹಾಯಕ ವೃತ್ತಿ ತೆರಿಗೆ ಅಧಿಕಾರಿಗಳ ಕಚೇರಿ, ವ್ಯವಸಾಯ ವರಮಾನ ತೆರಿಗೆ ಕಚೇರಿಯ ಆವರಣ, ೨ನೇ ವಲಯ, ಹೌಸಿಂಗ್ ಬೋರ್ಡ್ ಬಡಾವಣೆ, ಚಿಕ್ಕಮಗಳೂರು. ಜಿಲ್ಲೆಯ ಎಲ್ಲಾ ವೃತ್ತಿ ತೆರಿಗೆದಾರರೂ ಈ ಕಚೇರಿಯೊಂದಿಗೆ ತಮ್ಮ ವ್ಯವಹಾರಗಳನ್ನು ನಡೆಸಬೇಕೆಂದು ಕಚೇರಿಯ ಪ್ರಕಟಣೆಯೊಂದು ತಿಳಿಸಿದೆ.

ವಿದ್ಯುತ್ ಇಲಾಖೆ

ಲೈನ್‌ಮನ್ ಬೇಕು

ಕಟ್ಟಿನಮನೆ: ಇಲ್ಲಿ ಪದೇ ಪದೇ ವಿದ್ಯುತ್ ಕಡಿತ ಉಂಟಾಗುತ್ತಿದೆ. ಕುದುರೆಗುಂಡಿಯಿಂದ ನೌಕರರು ಬಂದು ರಿಪೇರಿ ಮಾಡಬೇಕು. ಆದರೂ ಪುನಃ ಸ್ವಲ್ಪ ಹೊತ್ತಿಗೇ ಕಡಿದುಹೋಗುತ್ತೆ. ಇಲ್ಲಿ ಪ್ರಾಥಮಿಕ ಆರೋಗ್ಯ ಘಟಕ, ಜಾನುವಾರು ಆಸ್ಪತ್ರೆ ಘಟಕ, ಶಾಲೆಗಳು, ಅರಣ್ಯ ಇಲಾಖೆ-ಮುಂತಾದ ಸಿಬ್ಬಂದಿಗಳಿದ್ದು, ಬಹಳ ತೊಂದರೆ ಆಗುತ್ತಿದೆ. ಆದ್ದರಿಂದ ಕಟ್ಟಿನಮನೆಗೆ ಖಾಯಂ ಆಗಿ ವಿದ್ಯುತ್ ಇಲಾಖೆಯ ಒಬ್ಬ ಲೈನ್‌ಮನ್ ಬೇಕು ಎಂದು ಇಲ್ಲಿನ ನಿವಾಸಿಗಳು ಕೇಳಿದ್ದಾರೆ.

ಬಿ. ಎಡ್. ಕಾಲೇಜ್‌ಗೆ

ಅರ್ಜಿ ಆಹ್ವಾನ

ಚಿಕ್ಕಮಗಳೂರು: ಇಲ್ಲಿನ ಎಂ. ಎಲ್. ಎಂ. ಎನ್. ಶಿಕ್ಷಣ ಮಹಾವಿದ್ಯಾಲಯಕ್ಕೆ (ಬಿ.ಎಡ್. ಕಾಲೇಜ್) ಸೇರಬಯಸುವ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲು ಆಗಸ್ಟ್ ಒಂದು ಕೊನೆಯ ದಿನವಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಕೆ. ವಿ. ನಂಜುಂಡಯ್ಯ ತಿಳಿಸಿದ್ದಾರೆ.

ಈ ಸಾಲಿನಲ್ಲಿ ಜಿಲ್ಲೆಯವರಿಗೆ ಹೆಚ್ಚು ಪ್ರಾತಿನಿಧ್ಯ ಕೊಡುವುದಾಗಿಯೂ ಹಾಗೂ ಅರ್ಹತಾ ಪರೀಕ್ಷೆಯಲ್ಲಿ ಹಿಂದುಳಿದು ಉತ್ತಮ ಅಂಕ ಪಡೆದವರಿಗೆ ಪ್ರವೇಶಗಳನ್ನು ಉಚಿತವಾಗಿ ನೀಡಲಾಗುವುದೆಂದಿದ್ದಾರೆ.

ಕಾಲೇಜಿಗೆ ೧೦೦ ಪ್ರವೇಶ

ಕೊಪ್ಪ: ಪ್ರಥಮ ದರ್ಜೆ ಕಾಲೇಜಿಗೆ ಅರ್ಜಿ ಹಾಕಿರುವವರ ಸಂಖ್ಯೆ ೧೦೦ಕ್ಕೆ ಮುಟ್ಟಿದ್ದು, ಸದ್ಯದಲ್ಲೇ ಕಾಲೇಜಿನ ಪ್ರಾರಂಭೋತ್ಸವ ನೆರವೇರಲಿದೆ.

ಪ್ರಾರಂಭದ ವರ್ಷವಾದ್ದರಿಂದ ಅಧ್ಯಾಪಕರ ಕೊರತೆಯ ಬಗ್ಗೆ ವಿದ್ಯಾರ್ಥಿಗಳಿಗೂ, ಪೋಷಕರಿಗೂ ಭಯ ಬೇಕಿಲ್ಲವೆಂದು ಪಾಠ ಪ್ರವಚನಗಳು ಸಕಾಲದಲ್ಲಿ ನಡೆಯುತ್ತವೆಂದೂ ಪ್ರಿನ್ಸಿಪಾಲ್ ಲಿಂಗಪ್ಪನವರು ತಿಳಿಸಿದ್ದು, ಕನ್ನಡ ಮಾಧ್ಯಮ ತೆರೆಯುವುದಕ್ಕೆ ಆದ್ಯತೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಕೊಪ್ಪ ಪುರಸಭೆ ತೀರ್ಮಾನ

ಕೊಪ್ಪ: ಇಲ್ಲಿನ ಬಸ್‌ಸ್ಟ್ಯಾಂಡಿನಿಂದ ಚಿತ್ರಮಂದಿರದವರೆಗಿನ ರಸ್ತೆಯ ಬಲ ಭಾಗದಲ್ಲಿ ೧೧ ಮಳಿಗೆಗಳ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಪುರಸಭೆ ಜು. ೧೫ರ ಸಭೆಯಲ್ಲಿ ನಿರ್ಧರಿಸಿದೆ. ಇದಕ್ಕೆ ೧ ಲಕ್ಷರೂ. ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಪುರಸಭೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಖರ್ಚನ್ನು ತೂಗಿಸಲು ಈ ಮಳಿಗೆ ಸಾಲು ಆದಾಯ ಮೂಲವಾಗುವಂತೆ ಉದ್ದೇಶಿಸಲಾಗಿದೆ.

"ಹೊಸೂರು ಗ್ರಾಮದ ಪಾನ ಸೌಕರ್ಯ"

ಕೊಪ್ಪ: ಕೊಪ್ಪ ತಾಲ್ಲೋಕು ಹೊಸೂರು ಗ್ರಾಮದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಾದ ಕಾರ್ಯಗಳು ಬೇಕಾದಷ್ಟಿವೆ. ಆದರೆ ಈ ಗ್ರಾಮದಲ್ಲಿ ಹೊಟ್ಟೆನ ಕೊಡಿಗೆ ಎಂಬಲ್ಲಿ ಒಂದು ಶರಾಬು ಅಂಗಡಿ ಇದ್ದು ಈಗ ಕೋಡಿಹಿತ್ಲು-ಹೊಸೂರು ಮಾರ್ಗದಲ್ಲಿ ಮತ್ತೊಂದು ಶರಾಬು ಅಂಗಡಿ ದಿಢೀರನೆ ಆಗಲಿದೆ. ಕೋಡಿಹಿತ್ಲುವಿನಲ್ಲೂ ಒಂದು ಶರಾಬುಅಂಗಡಿ ಇದೆ. ಹೀಗೆ ಜನೋಪಯೋಗಿ ಕೆಲಸಕ್ಕೆ ಬದಲು ಶರಾಬುಅಂಗಡಿ ಹೆಚ್ಚುತ್ತಿರುವ ಬಗ್ಗೆ ಗ್ರಾಮಸ್ಥರು ಆಶ್ಚರ್ಯ, ಕಳವಳ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕರಿಗೆ ತುರ್ತಾಗಿ ಆಗಬೇಕಾದ ಕಾರ್ಯಗಳೆಂದರೆ ಕೋಡಿಹಿತ್ಲುವಿನಿಂದ ಹೊಸೂರಿಗೆ ಹೋಗುವ ದಾರಿಯಲ್ಲಿ ಒಂದು ಸೇತುವೆ ಇದೆ. ಇದಕ್ಕೆ ಬೇಸಿಗೆ ಕಾಲದಲ್ಲಿ ಮಾತ್ರ ಜನರ ಸಂಪರ್ಕ. ಮಳೆಗಾಲದಲ್ಲಿ ಈ ಸೇತುವೆ ಮೇಲೆ ನೀರು ತುಂಬಿ ಹೋಗುತ್ತದೆ. ಇದರಲ್ಲಿ ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೊಪ್ಪಕ್ಕೆ ಬರುವುದಾದರೆ ಊರೆಲ್ಲ ಸುತ್ತಿ ಬಸ್ಸಿಗಾಗಿ ಬರಬೇಕು. ಮೂರು ವರ್ಷದ ಹಿಂದೆ ಇಬ್ಬರು ಸೇತುವೆ ಮೇಲೆ ಬರುತ್ತಿದ್ದಾಗ ಗಂಗಾ ಪಾಲಾಗಿ ಆಚೆಯ ದಡಕ್ಕೊಬ್ಬರು ಈಚೆಯ ದಡಕ್ಕೊಬ್ಬರಾಗಿ ಅಂತೂ ಅದೃಷ್ಟವಶಾತ್ ಮನೆ ಸೇರಿದರು. ಇನ್ನು ಗಾಡಿ, ರಿಕ್ಷಾ ಇವೆಲ್ಲ ಬೇಸಿಗೆ ಕಾಲಕ್ಕೆ ಮಾತ್ರ ಈ ರೋಡಿಗೆ ಸರಿ. ಈ ರಸ್ತೆ ತಾಲ್ಲೋಕು ಬೋರ್ಡಿಗೆ ಸೇರಿದೆ ಎಂಬ ವದಂತಿ ಇದೆ. ಎಂದಿರುವ ಗ್ರಾಮಸ್ಥರು "ಗ್ರಾಮಕ್ಕೆ ಶರಾಬು ಅಂಗಡಿ ಒಂದೇ ಸಾಕು; ನಮಗೆ ತಿರುಗಾಡಲು ಸೇತುವೆ ಬೇಕು" ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

'ಶಾಕ್' ಕೊಟ್ಟ ಇಲಾಖೆ

ಪರಿಹಾರ ಕೊಡಲಿಲ್ಲ

(ನಮ್ಮ ಪ್ರತಿನಿಧಿಯಿಂದ)

ಕೊಪ್ಪ: ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವಿದ್ಯುತ್ ಆಘಾತಕ್ಕೆ ಸಿಕ್ಕಿ ನರಳುತ್ತಿರುವ ಗೋಪಮ್ಮ ಎಂಬಾಕೆಗೆ ಇನ್ನೂ ಪರಿಹಾರ ಕೊಡುವಲ್ಲಿ ವಿದ್ಯುತ್ ಇಲಾಖೆ ಉದಾಸೀನ ತಳೆದಿದೆ ಎಂದು ಆಕೆಯ ಪತಿ [illegible] ಗುತ್ತಿ [illegible] ದೂರಿದ್ದಾರೆ.

ಘಟನೆ ನಡೆದ ಒಂದೆರಡು ದಿನ [illegible] [illegible] ಕನಿಷ್ಠ ೪೦೦೦ರೂ. [illegible] ಆಶ್ವಾಸನೆಯನ್ನು ಅಧಿಕಾರಿಗಳು ನೀಡಿದ್ದರು. ಆಘಾತಕ್ಕೊಳಗಾದಾಗ [illegible] ದೊರೆತಿದ್ದ [illegible] ತೊಂದರೆಯುಂಟಾಯಿತು. [illegible] ದಿನ ವರೆಗೆ ಸಾವಿರ ರೂ. [illegible] ಚಿಕಿತ್ಸೆ [illegible] ದ್ದಾರೆ.

[ಈ ಕುರಿತು [illegible] ಮ ವಿದ್ಯುತ್ ಇಲಾಖೆ [illegible] ತಿಳುಹಿಸಿದ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ. -ಸಂ.]

ಬಡವರಿಗೆ ಸಾಲ ಕೊಡದೆ ತಾತ್ಸಾರ

ಕೊಗ್ರೆಯ ಕಾರ್ಪೊರೇಶನ್ ಬ್ಯಾಂಕ್ ವಿರುದ್ಧ ಆರೋಪ

ಕೊಗ್ರೆ: ಇಲ್ಲಿನ ಕಾರ್ಪೊರೇಶನ್ ಬ್ಯಾಂಕ್ ಮ್ಯಾನೇಜರ್ ರವರು ಬಡವರಿಗೆ, ದುರ್ಬಲ ವರ್ಗದವರಿಗೆ ಸಾಲ ಕೊಡುವ ಬಗ್ಗೆ ಬಹಳ ತಾತ್ಸಾರ ಮಾಡುತ್ತಿದ್ದಾರೆಂದು ಅತ್ತಿಕುಡಿಗೆ ಗ್ರಾಮ ಪಂಚಾಯ್ತಿ ಸದಸ್ಯರೂ, ಗಿರಿಜನ ಸೇವಾ ಸಹಕಾರ ಸಂಘದ ನಿರ್ದೇಶಕರೂ ಆದ ಪಿ. ಶೇಷಯ್ಯ ಆರೋಪಿಸಿದ್ದಾರೆ.

ಕಲ್ಲುಗುಡ್ಡೆ ಗ್ರಾಮದ ಮೆಣಸಿನಸಾಧ್ಯದಲ್ಲಿ ೬ ಎಕರೆ ೩ ಗುಂಟೆ ತರಿಜಮೀನು ಹೊಂದಿರುವ ತಮ್ಮ ತಂದೆ ಪುಟ್ಟೇಗೌಡರು (ಗೌಡಲು ಪಂಗಡದ ಗಿರಿಜನ) ೩ ಸಾವಿರ ರೂ.ಅಲ್ಪಾವಧಿ ಬೆಳೆಸಾಲಕ್ಕೆಂದು ಬ್ಯಾಂಕ್ ಮ್ಯಾನೇಜರನ್ನು ವಿಚಾರಿಸಿದಾಗ ೩ಸಾವಿರ ಮಾತ್ರ ಕೊಡಲು ಒಪ್ಪಿಕೊಂಡ ಮ್ಯಾನೇಜರ್ ಸಂಬಂಧಪಟ್ಟ ದಾಖಲಾತಿಗಳನ್ನೆಲ್ಲ ತಂದರೆ ಮೇ ತಿಂಗಳ ಆಖೈರಿಗೆ ಒಳಗಾಗಿ ಮಂಜೂರು ಮಾಡುವುದಾಗಿ ತಿಳಿಸಿದರೆಂದು ಶೇಷಯ್ಯ ಹೇಳಿದ್ದಾರೆ. ಅದಕ್ಕಾಗಿ ತಾವು ಶಕ್ಷಣ ಕೊಪ್ಪದ (ಆನೇ ಪುಟಕ್ಕೆ)

ಓದುಗರ ಪತ್ರಗಳು

"ಹಿಂದುಳಿದ ಹಳ್ಳಿಗಳಿಗೆ ಬೇಕಾಗಿದೆ ಒಂದು ಕಾಲುದಾರಿ ಸೇತುವೆ"

ಮಾನ್ಯರೇ,

ಶೃಂಗೇರಿ ತಾಲ್ಲೂಕು ಕಿಗ್ಗಾ ಹೋಬಳಿಯ ದಿಂಡೋಡಿ, ಹೆಗ್ತೂರು, ಜೋಳಿಹೊಡ್ಡು, ಎಡದಹಳ್ಳಿ, ಸುಂಕದಮಕ್ಕಿ, ಹರಾಬೆಳಲು, ಕಾರ್ಕಿ, ಹುಲ್ಗಾರುಬೈಲು, ಅವಂಟು, ದ್ಯಾವಂಟು, ವಕ್ಕಿನ ಕಾರ್ಕಿ ಮುಂತಾದ ಹಳ್ಳಿಗಳು ತುಂಗಾ ಮತ್ತು ಅದರ ಉಪ ನದಿಯಾದ ನಂದಿನಿ ನದಿಗಳ ಮಧ್ಯದ ಭೂ ಭಾಗದಲ್ಲಿ ಇದ್ದು, ಈ ಕುಗ್ರಾಮಕ್ಕೆ ಯಾವ ಸಂಪರ್ಕ ಸಾಧನಗಳೂ ಇಲ್ಲದೆ ಒಂದು ದ್ವೀಪದಂತಾಗಿದೆ.

ಈ ಹಳ್ಳಿಗಳಲ್ಲಿ ಸುಮಾರು ೧೨೦ ಮನೆಗಳಿದ್ದು ಒಟ್ಟು ಜನಸಂಖ್ಯೆ ಸುಮಾರು ೬೫೦ ಆಗಬಹುದು. ಇವರೆಲ್ಲಾ ರೈತಾಪಿ ಜನರಾಗಿದ್ದು, ವ್ಯವಸಾಯವೇ ಅವರ ಜೀವನಾಧಾರವಾಗಿರುತ್ತದೆ. ಇಲ್ಲಿಯ ಮುಗ್ಧ ಹಾಗೂ ಬಹುಮಂದಿ ಅನಕ್ಷರಸ್ಥರಾಗಿರುವ ಜನರು ಆರ್ಥಿಕವಾಗಿ ಬಹಳ ಹಿಂದುಳಿದಿರುತ್ತಾರೆ. ಈ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ, ವೈದ್ಯಕೀಯ ಸೌಲಭ್ಯಗಳು, ಅಂಗಡಿ, ಮಾಧ್ಯಮಿಕಶಾಲೆಗಳೇ ಮುಂತಾದ ಯಾವ ಅತ್ಯಾವಶ್ಯಕ ಸಾಲಭ್ಯಗಳೂ ಇರುವುದಿಲ್ಲ. ಇಂತಹ ಕೆಲವು ಸೌಲಭ್ಯಗಳು ಇವುಗಳ ಹತ್ತಿರದ ಸ್ಥಳವೆಂದರೆ ತುಂಗಾ ನದಿಯ ಬಲ ದಂಡೆಯಲ್ಲಿ ಸರಾಸರಿ ೨ ಕಿಲೋಮೀಟರ್ ದೂರದಲ್ಲಿರುವ 'ನೆಮ್ಮಾರು'. ತಾಲ್ಲೂಕು ಸ್ಥಳ ಶೃಂಗೇರಿಯು ಸರಾಸರಿ ೮ ಕಿಲೋಮೀಟರ್ ದೂರದಲ್ಲಿದೆ.

ಮಕ್ಕಳ ವಿದ್ಯಾಭ್ಯಾಸ, ದಿನನಿತ್ಯದ ಅವಶ್ಯಕತೆಗಳು, ಸಾರಿಗೆ, ಸಂಪರ್ಕ, ವೈದ್ಯಕೀಯ ಸೌಲಭ್ಯಗಳು, ವ್ಯಾಪಾರ, ಬ್ಯಾಂಕ್ ವ್ಯವಹಾರಗಳಿಗೆ ಈ ಹಳ್ಳಿಯ ಜನರು ನೆಮ್ಮಾರು ಅಥವಾ ಶೃಂಗೇರಿಯನ್ನೇ ಅವಲಂಬಿಸಬೇಕಾಗಿದೆ, ಹಾಗೂ ಇದಕ್ಕಾಗಿ ತುಂಗಾನದಿಯನ್ನು ದಾಟುವುದು ಅನಿವಾರ್ಯ.

ನೆಮ್ಮಾರು, ಹೋಬಳಿಯ ಮತ್ತೊಂದು ದಡದಲ್ಲಿರುವ ಸ್ವಲ್ಪ ದೊಡ್ಡ ಊರು. ಇಲ್ಲಿ ಮಾಧ್ಯಮಿಕಶಾಲೆ, ಸಹಕಾರಸಂಘ, ವೈದ್ಯರು, ಆರೋಗ್ಯ ಕೇಂದ್ರ, ಅಂಚೆ ಕಛೇರಿ, ಹಾಗೂ ಅಂಗಡಿಗಳು ಇವೆ. ಇದು ಶೃಂಗೇರಿ-ಕಿಕ್ಕೇರಿ ರಸ್ತೆಯಲ್ಲಿದ್ದು ಶೃಂಗೇರಿ ನೆಮ್ಮಾರು ಮಧ್ಯೆ ದಿನವಹಿ ಮೋಟಾರು ವಾಹನ ಸಂಚಾರವಿರುತ್ತದೆ.

ಬೇಸಿಗೆಯ ಕಾಲದಲ್ಲಿ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಹೊಳೆಯನ್ನು ದಾಟಬಹುದಾದರೂ, ಮಳೆಗಾಲದ ೬-೭ ತಿಂಗಳುಗಳಲ್ಲಿ ಇದು ಸಾಧ್ಯವಿಲ್ಲ. ನೆಮ್ಮಾರಿನಲ್ಲಿ ಮಾತ್ರ ಒಂದು ಚಿಕ್ಕ ನಾಡದೋಣಿಯಿದ್ದು, ಅದರ ಮುಖಾಂತರವೇ ದಾಟಬೇಕು. ದೋಣಿಯ ಸಂಚಾರ, ಪ್ರವಾಹಕಡಿಮೆಯಿದ್ದ ಸಮಯದಲ್ಲಿ ಬೆಳಿಗ್ಗೆ ೭-೦೦ರಿಂದ ಸಾಯಂಕಾಲ ೬-೦೦ ಗಂಟೆಯ ವರೆಗೆ ಮಾತ್ರ ಇರುತ್ತದೆ. ಈ ರೀತಿ ದಾಟುವಾಗ, ನದಿಯಲ್ಲಿಯ ಪ್ರವಾಹಕ್ಕನುಗುಣವಾಗಿ, ದುಬಾರಿ ಹಣವನ್ನು ಕೊಡಬೇಕಾಗುವುದು. ಅಲ್ಲದೆ ಮಳೆಗಾಲದಲ್ಲಿ ಸಾಯಂಕಾಲ ೬-೦೦ರಿಂದ ಬೆಳಿಗ್ಗೆ ೭-೦೦ ಗಂಟೆಯವರೆಗೆ, ಎಂತಹ ತುರ್ತು ಪರಿಸ್ಥಿತಿಯಲ್ಲಿಯೂ ಹೊರಗಿನಿಂದ ಯಾವ ರೀತಿಯ ಸಹಾಯ ಸೌಕರ್ಯಗಳನ್ನು ಪಡೆಯಲು ಈ ಹಳ್ಳಿಜನರಿಗೆ ಅಸಾಧ್ಯ. ಮಳೆಗಾಲದಲ್ಲಿ ನೆಮ್ಮಾರು, ಶೃಂಗೇರಿಯ ಶಾಲಾ ಕಾಲೇಜುಗಳಿಗೆ ಹೋಗಿ ಬರುವ ಹುಡುಗರ ಪಾಡಂತೂ ಹೇಳತೀರದು. ಪ್ರವಾಹದಲ್ಲಿ ಬರುವ ಮರ-ಮಟ್ಟುಗಳು ದೋಣಿಗೆ ತಗುಲಿ, ದೋಣಿಯೇ ಮುಳುಗುವ ಸಂಭವವಿದ್ದು, ಈ ರೀತಿ ದೋಣಿ ಸಂಚಾರ ಬಹಳ ಅಪಾಯಕಾರಿಯಾಗಿರುತ್ತದೆ.

ಮೇಲೆ ವಿವರಿಸಿದ ಸಮಸ್ಯೆಗೆ, ಸರಿಯಾದ ಪರಿಹಾರವೆಂದರೆ, ತುಂಗಾನದಿಗೆ ಸದಾ ಉಪಯೋಗಕ್ಕೆ ಬರುವಂತೆ ಕಡಿಮೆ ವೆಚ್ಚದಲ್ಲಿ, ಹಾಗೂ ಸೂಕ್ತ ಸ್ಥಳದಲ್ಲಿ, ಒಂದು ಕಾಲು ದಾರಿ ಸೇತುವೆ (ಫುಟ್‌ಪಾತ್ ಬ್ರಿಡ್ಜ್) ನಿರ್ಮಾಣ. ಈ ದಿಶೆಯಲ್ಲಿ ಎರಡು ಮೂರು ನಮೂನೆಗಳನ್ನು ಅಭ್ಯಾಸ ಮಾಡಲಾಗಿದ್ದು ಚಿಕ್ಕ ತೂಗು ಸೇತುವೆಯು (ಸಸ್ಪೆನ್‌ಶನ್ ಟೈಪ್ ಫುಟ್‌ಬ್ರಿಡ್ಜ್) ಸೂಕ್ತ ಹಾಗೂ ಅತಿ ಕಡಿಮೆ ವೆಚ್ಚದ್ದಾಗಿ ಕಂಡು ಬಂದಿರುತ್ತದೆ.

ಈ ಯೋಜಿತ ಕಾಲುದಾರಿಸೇತುವೆಯು ಈ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಜನರ ಕಷ್ಟಗಳಿಗೆ ಸರಿಯಾದ, ದೀರ್ಘಾವಧಿ ಹಾಗೂ ಅವಶ್ಯಕವಾದ ಪರಿಹಾರವಾಗಿದ್ದು—ಒಂದು ವರದಾನವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಇದರ ನಿರ್ಮಾಣದಿಂದ ಇಲ್ಲಿಯ ಜನಜೀವನ ಸುಧಾರಿಸಿ—ಸಮಗ್ರ ಅಭಿವೃದ್ಧಿಯ ಗುರಿ ಸಾಧ್ಯತೆಯಿದೆ. ಇಲ್ಲಿಯವರೆಗೆ ಬಹಳ ಹಿಂದುಳಿದಿರುವ ಈ ಭಾಗಗಳು, ತಾಲ್ಲೂಕಿನ ಇತರ ಭಾಗಗಳಿಗೆ (ಕಿರ್ಣ ಪುಟಕ್ಕೆ)

ಸಂಪಾದಕೀಯ

ಹೊಣೆ ಜಾರಿಸುವ ಪ್ರವೃತ್ತಿ

ಕೊಪ್ಪ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದವರು ಕಳೆದ ಬೇಸಿಗೆ ಬೆಳೆಗಾಗಿ ಬೀಜದ ಭತ್ತ ಅಂತ ಮಾರಿದ್ದು ಅವರು ತಿಳಿಸಿದಂತೆ ಬೇಗ ಕುಯ್ಲಿಗೆ ಬರುವ ತಳಿಯಾಗಿರದೆ ಬೇರೆ ಎಂತದೋ ಆಗಿದ್ದು, ಕೊಪ್ಪ ತಾಲ್ಲೂಕು ಮಾತ್ರವಲ್ಲದೆ ಶೃಂಗೇರಿ ತಾಲ್ಲೂಕಿನ ಕೆಲವೆಡೆ ಕೂಡ ರೈತರು ಬಹಳ ತೊಂದರೆ, ನಷ್ಟ ಅನುಭವಿಸಿದ್ದಾಗಿ ವರದಿಯಾಯಿತು. ಇದಕ್ಕೆ ಪ್ರತಿಯಾಗಿ ತಾ.ವ್ಯ.ಮಾ.ಸ.ಸಂಘದವರೂ, ಚಿಕ್ಕಮಗಳೂರಿನ ಕೃಷಿ ನಿರ್ದೇಶಕರೂ ಪತ್ರಿಕಾ ಹೇಳಿಕೆಗಳನ್ನು ಕೊಟ್ಟು, ಈ ರೀತಿಯ ನಷ್ಟಕ್ಕೆ ತಾವುಗಳು ಖಂಡಿತಾ ಹೊಣೆಯಲ್ಲವೆಂದು ಘೋಷಿಸಿಕೊಂಡಿದ್ದಾರೆ.

ಒಂದು ಕಡೆ, ರೈತರು ಹೇಳಿದ ವಿವರವೇ ಒಂದು, ಇವರ ಸ್ಪಷ್ಟೀಕರಣವೇ ಇನ್ನೊಂದು ಆಗಿದೆ. ಇದಕ್ಕಿಂತ ಮುಖ್ಯವಾದ ಸಂಗತಿಯೆಂದರೆ ಒಂದು ದುರ್ಘಟನೆ ಅಥವಾ ತಪ್ಪು ಅಥವಾ ಅವ್ಯವಹಾರ ನಡೆದರೆ ಸಂಬಂಧಪಟ್ಟವರು ಮೊದಲಿಗೆ ಅದು ನಡೆದೇ ಇಲ್ಲ ಎಂದು ಸಾಧಿಸಲು ಪ್ರಯತ್ನಿಸುವುದು, ಅದು ಸಾಧ್ಯವಾಗದಿದ್ದರೆ ಅದಕ್ಕೂ ತಮಗೂ ಸಂಬಂಧವೇ ಇಲ್ಲ ಎಂದು ಸಾಧಿಸಹೊರಡುವುದು ಈ ಪ್ರವೃತ್ತಿಯನ್ನು ನಾವೀಗ ಎಲ್ಲ ಕಡೆ ಕಾಣುತ್ತಿದ್ದೇವೆ.

ಉದಾಹರಣೆಗೆ ನಮ್ಮ ರಾಜ್ಯದ ಅರಣ್ಯ ಮಂತ್ರಿಗಳು ವಿಧಾನಸಭೆಯಲ್ಲಿ ಈಚೆಗೆ ಕ್ಷಮಾಪಣೆ ಕೇಳಿದ ಪ್ರಸಂಗ. ಕಾವೇರಿ ನದಿಯ ಜಲಾಧಾರವಾದ ಕಾಡಿನ ಮೂರುಸಾವಿರ ಎಕರೆ ಪ್ರದೇಶದಲ್ಲಿ ಮುನತ್ತು ವರ್ಷಕಾಲ ಕಾಡು ಕಡಿಯಲು ಪರವಾನಗಿ ಕೊಟ್ಟು ಅದನ್ನು ಅಡ್ಡಾದಿಡ್ಡಿ ಸಮರ್ಥಿಸಿಕೊಳ್ಳಲು ಹೋಗಿ ಸಾಧ್ಯವಾಗದಾಗ "ಕ್ಷಮಿಸಿ" ಎಂದರಂತೆ. ಯಾರು ಕ್ಷಮಿಸಬೇಕು? ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದವರೇನೋ ತಾವೊಂದು ಸಂಸದೀಯ ಗೆಲುವು ಸಾಧಿಸಿಬಿಟ್ಟೆವೆಂದು ಬೇಗ "ಕ್ಷಮಿಸಿ" ದರೂ ಕ್ಷಮಿಸಿಯಾರು. (ಅದಕ್ಕಿಂತ ಇನ್ನೇನು ಮಾಡಿಯಾರು "ಹಲ್ಲು ಕಿತ್ತ ಹಾವು" ಗಳು ಪಾಪ) ಆದರೆ ಈ ಲೂಟಿಯಿಂದ ಶತಮಾನಗಳ ಕಾಲ ಅನರ್ಥ ಪರಂಪರೆ ಎದುರಿಸಬೇಕಾದ ನಮ್ಮ ಮುಂದಿನ ಪೀಳಿಗೆ ಈ ಎಲ್ಲ ರಾಕ್ಷಸರನ್ನು ಕ್ಷಮಿಸೀತೆ?

ಒಂದು ಕಾಲಕ್ಕೆ ದಟ್ಟ ಮಲೆನಾಡಾಗಿದ್ದ ನಮ್ಮ ನ. ರಾ. ಪುರ ತಾಲೂಕು ಇಂದು ಅರ್ಧಕ್ಕರ್ಧ ಭಾಗ ಕ್ಷಾಮವನ್ನು ಎದುರಿಸುತ್ತಿದೆಯಲ್ಲ, ಇದಕ್ಕೆಲ್ಲ ನಡೆಯಗೊಟ್ಟ ನಾಯಕರು, ಅಧಿಕಾರಿಗಳು, 'ಕ್ಷಮಿಸಿ' ಎಂದರೆ ಕ್ಷಮಿಸಲು ಯಾರಿದ್ದಾರೆ?

ಒಂದು ತೊಂದರೆ, ನಷ್ಟ ಆಯಿತೆಂದು ತಿಳಿದು ಬಂದಾಗ ಅದಕ್ಕೆ ತಾವು ಹೊಣೆಯಲ್ಲ ಎಂದು ಸಾಧಿಸಲು ಯಾವ ವಾದ ಮಂಡಿಸಬಹುದು ಅಂತ 'ಲಾಯರ್ ತಲೆ ಖರ್ಚುಮಾಡುವ' ಬದಲು, ಅದಕ್ಕೆ ಹೊಣೆಗಾರರು ಯಾರೇ ಇರಲಿ, ಯಾವುದಾದರೂ ರೀತಿ ಪರಿಹಾರ ಒದಗಿಸಲು ಸಾಧ್ಯವೆ ಎಂದು ಸಂಬಂಧಪಟ್ಟವರು ಯೋಚಿಸಲು ಕಲಿಯುವುದು ಆರೋಗ್ಯಕರವಲ್ಲವೆ?

ಬೀಜದ ಭತ್ತ ವಿತರಣೆ ಬಗ್ಗೆ ಸ್ಪಷ್ಟೀಕರಣ

ಮಾನ್ಯರೆ,

ಕೊಪ್ಪ ಟಿ.ಎ.ಪಿ.ಸಿ.ಎಮ್.ಎಸ್. ನವರು ೧೯೮೨-೮೩ನೇ ಸಾಲಿನ ಮುಂಗಾರಿ ಬೆಳೆಗೆ ದಿನಾಂಕ ೨೦-೨-೮೨ರಲ್ಲಿ ಮೂಡಿಗೆರೆಯಿಂದ ಕೇವಲ ೭೦ಕ್ವಿಂಟಾಲ್ ಮಾತ್ರ ಇಂಟಾನ್ ಭತ್ತದ ರಿಜಿಸ್ಟರ್ಡ್ ಬೀಜವನ್ನು ತಂದಿದ್ದು, ೮೨ನೇ ಮೇ ತಿಂಗಳಿಂದ ರೈತರಿಗೆ ಈ ಮುಂಗಾರಿ ಬೆಳೆಗೆ ಕೊಡಲಾಗಿದೆ. ಸಸಿ ಈಗಾಗಲೇ ಉತ್ತಮವಾಗಿ ಬಂದಿದ್ದು, ನಾಟಿ ಕೆಲಸ ನಡೆಯುತ್ತಿದೆ. ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ೨೦೦ಕ್ವಿಂಟಾಲ್ ಭತ್ತದ ಬೀಜ ತಂದಿಲ್ಲ. ಕಳೆದ ಬೇಸಿಗೆ ಬೆಳೆಗೆ ಈ ಬೀಜವನ್ನು ಕೊಟ್ಟಿರುವುದಿಲ್ಲ; ಹಾಗೂ ೪೦೦ಎಕರೆ ಪ್ರದೇಶದಲ್ಲಿ ಈ ಭತ್ತವನ್ನು ಬೆಳೆದಿದ್ದೂ ಇಲ್ಲ. ರೈತರುಗಳಿಗೆ ವಂಚನೆ ಮಾಡುವ ಉದ್ದೇಶ ಟಿ.ಎ.ಪಿ.ಸಿ.ಎಮ್.ಎಸ್. (ಸೊಸೈಟಿ) ನವರಿಗಾಗಲೀ, ವ್ಯವಸಾಯ ಇಲಾಖೆಗಾಗಲೀ ಎಳಷ್ಟೂ ಇಲ್ಲ. ಈವರೆಗೂ ಸೊಸೈಟಿಯು ಉತ್ತಮ ಕೆಲಸ ನಿರ್ವಹಿಸುತ್ತಾ ಬಂದಿದ್ದು, ಇನ್ನು ಮುಂದೆಯೂ ರೈತರಿಗೆ ಸಾಧ್ಯವಿದ್ದಷ್ಟು ಉತ್ತಮವಾಗಿ ಸಹಾಯ ಸಹಕಾರಗಳನ್ನು ಕೊಡಬೇಕೆಂಬುದು ಸೊಸೈಟಿಯ ಉದ್ದೇಶವಾಗಿದೆ. ಮಹಾಜನರು ಸಹಕರಿಸಬೇಕಾಗಿ ಕೋರುತ್ತೇವೆ.

ಕೊಪ್ಪ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ದ ಪರವಾಗಿ,

(ಸಹಿ) (ಎ. ಬಿ. ವಾಸಪ್ಪ),
ಅಧ್ಯಕ್ಷರು.

"ಹೆಚ್ಚು ಇಳುವರಿ ಕೊಡುವ ಭತ್ತ"

ಕೃಷಿ ಇಲಾಖೆ ಸ್ಪಷ್ಟೀಕರಣ

ದಿನಾಂಕ ೨೭-೬-೮೨ ರ 'ದೀವಟಿಗೆ' ಪತ್ರಿಕೆಯ "ಹೆಚ್ಚು ಇಳುವರಿ ಕೊಡುವ ಭತ್ತ?" ಎಂಬ ತಲೆಬರಹದ ವಾರ್ತೆ, ಇತರ ಪತ್ರಿಕೆಗಳಲ್ಲಿ ಕೊಪ್ಪ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಿಂದ ೬ ತಿಂಗಳ ಹಿಂದೆ ಮಾರಾಟ ಮಾಡಿದ ಭತ್ತದ ಬಗ್ಗೆ ಹಾಗೂ ಇದರಿಂದ ರೈತರಿಗೆ ಉಂಟಾಗಿರುವ ನಷ್ಟದ ಬಗ್ಗೆ ವರದಿಯಾಗಿರುವುದು ಸರಿಯಷ್ಟೆ. ಸದರಿ ಇಂಟಾನ್ ಭತ್ತವು ಮೂಲ ತಳಿಯದಾಗಿದ್ದು, ೧೯೮೦-೮೧ನೇ ಸಾಲಿನಲ್ಲಿ ಸಿರ್ಸಿ ಸಂಶೋಧನಾ ಕೇಂದ್ರದಲ್ಲಿ ಬೆಳೆದಂತ ಭತ್ತವನ್ನು ತಂದು ಈ ಜಿಲ್ಲೆಯ ಕೆಲವೊಂದು ರೈತರಿಗೆ ೧೯೮೧-೮೨ನೇ ಮುಂಗಾರು ಹಂಗಾಮಿನಲ್ಲಿ ಹಂಚಲಾಗಿತ್ತು, ಹಾಗೂ ಇದನ್ನು ಇಲಾಖಾಧಿಕಾರಿಗಳ ಉಸ್ತುವಾರಿಯಲ್ಲಿ ರೈತರ ಜಮೀನಿನಲ್ಲಿ ಬೆಳೆಸಲಾಗಿತ್ತು. ಈ ರೀತಿ ಉತ್ಪಾದಿಸಲಾದ ಭತ್ತದಲ್ಲಿ ಅಂದಾಜು ೭೦ ಕ್ವಿಂಟಾಲ್ ಭತ್ತವನ್ನು ಸದರಿ ಸಹಕಾರ ಸಂಘದಲ್ಲಿ ದಿನಾಂಕ ೨೫-೨-೧೯೮೨ರಂದು ದಾಸ್ತಾನು ಮಾಡಿಸಿ ೧೯೮೨ನೇ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬಿತ್ತನೆಗಾಗಿ ಹಂಚಲಾಗಿದೆ. ೧೯೮೨ನೇ ಏಪ್ರಿಲ್, ಮೇ ತಿಂಗಳಲ್ಲಿ ಸರಬರಾಜಾದಂತ ಭತ್ತ ೧೯೮೨ನೇ ಬೇಸಿಗೆಯಲ್ಲಿ ಬೆಳೆಯಲು ಸಾಧ್ಯವೇ ಇಲ್ಲ. ಆದ್ದರಿಂದ ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವ ವಿಷಯವು ಸರಿಯಲ್ಲ; ಹಾಗೂ ಇಲಾಖಾಧಿಕಾರಿಗಳು ಇದಕ್ಕೆ ಹೊಣೆಯಲ್ಲ ಎಂದು ಎಲ್ಲಾ ರೈತ ಬಾಂಧವರಿಗೆ ಈ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತೇನೆ.

—ಎಫ್. ಜಿ. ನಾಗಸುಂದರಂ,
ಪ್ರಧಾನ ಕೃಷಿ ಅಧಿಕಾರಿಗಳು,
ಚಿಕ್ಕಮಗಳೂರು.

ಓದುಗರ ಪುಟ

ಉತ್ತಮೇಶ್ವರ ಹಿರಿಯ ಪ್ರಾಥಮಿಕ ಶಾಲೆ:

ಏಳು ತರಗತಿಗಳಿಗೆ ಮೂವರು ಅಧ್ಯಾಪಕರು

ಮಾನ್ಯರೆ,

ವಂದನೆಗಳು. ಅದಾಗಿ, ಬೆಳವಿನಕೊಡಿಗೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟ ಉತ್ತಮೇಶ್ವರದಲ್ಲಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಈ ಶಾಲೆಯಲ್ಲಿ ಸುಮಾರು ೧೮೦ ಬಾಲಕ ಬಾಲಕಿಯರು ವಿದ್ಯಾಭ್ಯಾಸ ಮಾಡಲು ಬರುತ್ತಿದ್ದಾರೆ. ಈ ಶಾಲೆಗೆ ಹಿಂದೆ ಅಂದರೆ ಎರಡು ವರ್ಷದ ಹಿಂದೆ ಉಪಾಧ್ಯಾಯರನ್ನು ಸಾಕಷ್ಟು ಸಂಖ್ಯೆಯಲ್ಲಿ ನಿಯಮಿಸದೇ ಕೇವಲ ಎರಡು ಜನರಿದ್ದರು. ಆ ಸಮಯದಲ್ಲಿ ಊರಿನ ಕೆಲ ಯುವಕರು ಈ ಶಾಲೆಯಲ್ಲಿ ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ಪಾಠಾ ಹೇಳಿ ಮಕ್ಕಳಿಗೆ ವಿದ್ಯಾಭ್ಯಾಸ ಸುಗಮವಾಗಿ ನೆಡೆಯಲು ನೆರವಾದರು. ಈ ಸಮಯದಲ್ಲಿ ಈ ಶಾಲೆಗೆ ಭೇಟಿ ನೀಡಿದ ಕೊಪ್ಪಾ ತಾಲ್ಲೋಕು ಉಪ ವಿದ್ಯಾಧಿಕಾರಿಗಳಾದ ಶ್ರೀ ಚಂದ್ರಶೇಖರಯ್ಯ ನವರು ಉಪಾಧ್ಯಾಯರ ಕೊರತೆಯನ್ನು ಗಮನಿಸಿ ಕೂಡಲೇ ಈ ಶಾಲೆಗೆ ಉಪಾಧ್ಯಾಯರನ್ನು ನೇಮಕಮಾಡಿ ಉಪಾಧ್ಯಾಯರ ಕೊರತೆಯನ್ನು ನಿವಾರಿಸಿದರು. ಆದರೆ ಈ ಸಾರಿ ರಜ ಕಳೆದ ನಂತರ ಪುನಃ ಇಬ್ಬರು ಉಪಾಧ್ಯಾಯಿನಿಯರು ವರ್ಗ ಮಾಡಿಸಿಕೊಂಡರು. ಮತ್ತು ಒಬ್ಬರು ಉಪಾಧ್ಯಾಯರಿಗೆ ನಿವೃತ್ತಿ ಆಯಿತು. ಅನಂತರ ಉಳಿದವರು ಇಬ್ಬರೇ. ಆದರೂ ನಿವೃತ್ತಿ ಹೊಂದಿದ ಉಪಾಧ್ಯಾಯರನ್ನು ಪುನಃ ಹತ್ತು ತಿಂಗಳು ಇವರ ಸೇವೆಯನ್ನು ಮುಂದುವರಿಸಿದ್ದರಿಂದಾ ಅಂತೂ ಏಳು ತರಗತಿಗಳಿಗೆ ಮೂರು ಜನ ಉಪಾಧ್ಯಾಯರಿರುತ್ತಾರೆ. ಆದರೆ ಈ ಪೈಕಿ ಒಬ್ಬರಿಗೆ ಕಛೇರಿ ಕೆಲಸ ಮತ್ತು ಓಡುಗಾಟ ವಗೈರೆ ಆದ ಎರಡು ಜನರೇ ತರಗತಿಗಳನ್ನು ನೆಡೆಸಬೇಕಾಗುತ್ತೆ. ಇವರಲ್ಲಿಯೂ ಒಬ್ಬರು ಅನಿವಾರ್ಯ ಕಾರಣದಿಂದಾ ರಜಾ ಹಾಕಿದರೆ ಏಕೋಪಾಧ್ಯಾಯ ಶಾಲೆ ಆಗುತ್ತೆ. ಆಗ ೧೮೦ ಮಕ್ಕಳನ್ನು ಒಬ್ಬ ಉಪಾಧ್ಯಾಯರು ಹಾಜರಿ ಹಾಕುವುದೂ ಕಷ್ಟವಾಗುತ್ತೆ. ಈ ತೊಂದರೆಗಳನ್ನು ಗಮನಿಸಿ ಶಾಲಾಭಿವೃದ್ಧಿ ಸಮಿತಿಯವರು ಈ.ನ ತಾಲ್ಲೋಕು ಉಪವಿದ್ಯಾಧಿಕಾರಿಗಳಿಗೆ ಉಪಾಧ್ಯಾಯರನ್ನು ಜಾಗ್ರತೆ ಕಳಿಸಿ ಕೊಡುವಂತೆ ಬೇಡಿಕೆ ಸಲ್ಲಿಸಿದರೆ ಈವರೇಗೆ ಯಾವ ಜವಾಬು ಬಂದಿರುವುದಿಲ್ಲಾ. ಮತ್ತು ಗ್ರಾಮಸ್ಥರು ಪೋಷಕರು ಸೇರಿ ಗ್ರಾಮ ಪಂಚಾಯ್ತಿ ಮೂಲ್ಕ ತಾಲ್ಲೋಕು ಉಪ ವಿದ್ಯಾಧಿಕಾರಿಗಳಿಗೂ ಮತ್ತು ಜಿಲ್ಲಾ ಸಹ ವಿದ್ಯಾಧಿಕಾರಿಗಳೀಗೂ ಈ ಶಾಲೆಗೆ ಉಪಾಧ್ಯಾಯರಿಲ್ಲದೆ ತೊಂದರೆಯಾಗಿರುವುದನ್ನು ವಿವರಿಸಿ ಅರ್ಜಿ ಸಲ್ಲಿಸಿದಾಗ್ಯೂ ಅಧಿಕಾರಿ ವರ್ಗದವರು ಈ ಶಾಲೆ ಬಗ್ಗೆ ಗಮನ ಹರಿಸಿಲ್ಲಾ. ಆದ್ದರಿಂದಾ ತಮ್ಮ ಪತ್ರಿಕೆ ಮುಖಾಂತರವಾದರೂ ನಮ್ಮ ಶಾಲೆಯ ಮಕ್ಕಳಿಗೆ ಆಗುತ್ತಿರುವ ತೊಂದರೆಯನ್ನು ಅಧಿಕಾರಿಗಳ ಗಮನಕ್ಕೆ ತರುತ್ತೀರೆಂದು ನಂಬಿ ಈ ಪತ್ರ ಬರೆಯುತ್ತೀನೆ. ತಾವು ಉದಾಸೀನ ಮಾಡದೇ ನಮ್ಮ ಶಾಲಾಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಉಪಾಧ್ಯಾಯರನ್ನು ನೇಮಿಸುವತ್ತ ಅಧಿಕಾರಿಗಳ ಗಮನ ಹರಿಯುವಂತೆ ಮಾಡುತ್ತೀರೆಂದು ನಂಬಿರುತ್ತೇನೆ.

—ವಿ. ರಾಮರಾವ್, ಕೆಳಂಗಡಿ.

ಕಾಲುದಾರಿ ಸೇತುವೆ

(೨ನೇ ಪುಟದಿಂದ)

ಜೊತೆಯಾಗಿ ನಿಲ್ಲಬಹುದು. ಈ ಸೇತುವೆಯಿಂದಾಗುವ ಉಪಯೋಗಕ್ಕೆ ಹೋಲಿಸಿದರೆ, ಇದರ ನಿರ್ಮಾಣ ವೆಚ್ಚ, ಹೆಚ್ಚೇನೂ ಅನಿಸುವುದಿಲ್ಲ. ಅಲ್ಲದೆ ಇಂತಹ ಸೇತುವೆಗಳನ್ನು ಬೇರೆ ಬಹಳ ಸ್ಥಳಗಳಲ್ಲಿ ನಿರ್ಮಿಸಲಾಗಿದ್ದು. ಇದು ಸುಲಭಸಾಧ್ಯವೂ ಆಗಿರುತ್ತದೆ.

ಆದ್ದರಿಂದ ಗ್ರಾಮಾಂತರ ಪ್ರದೇಶವಾದ ಈ ಹಳ್ಳಿಗಳಲ್ಲಿ ವಾಸಿಸುವ ಕಡುಬಡವರು ಹಾಗೂ ಅಲ್ಪಸಂಖ್ಯಾತರ ಕುಂದುಕೊರತೆಗಳನ್ನು ನಿವಾರಿಸುವ ದಿಸೆಯಲ್ಲಿ ಘನ ಸರ್ಕಾರದವರು, ವಿಶೇಷವಾಗಿ ಶೃಂಗೇರಿ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಹೆಚ್ಚಿನ ಗಮನವನ್ನು ಹರಿಸುವುದರ ಮೂಲಕ, ಶೀಘ್ರದಲ್ಲಿಯೇ ನಮ್ಮ ಸಂಘದ ಮನವಿಯನ್ನು ಪುರಸ್ಕರಿಸಿ "ಕಾಲುದಾರಿ ಸೇತುವೆ" ನಿರ್ಮಾಣಕಾರ್ಯವನ್ನು ಕೈಗೊಳ್ಳಲಿ.

ವೈ. ಎಸ್. ನಾಗೇಶಭಟ್ಟ,
ಕಾರ್ಯದರ್ಶಿ, ಕನ್ನಡ ಯುವಕ ರೈತಸಂಘ
ಯಡದಲ್ಲಿ, ಅಂಚೆ ನೆಮ್ಮಾರು,
ಶೃಂಗೇರಿ ತಾಲ್ಲೋಕು.

ಅರಣ್ಯ ಸಂರಕ್ಷಣೆಯೇ? ರೈತರ ಉಚ್ಚಾಟನೆಯೇ?

ನಮ್ಮ ಸರ್ಕಾರದವರು ಈಚೆಗೆ ಕಾಡು ಬೆಳೆಸುವ ನೆಪದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ವಿಸ್ತೀರ್ಣವುಳ್ಳ ಸರ್ಕಾರಿ ಸ್ಥಳವನ್ನು ಇಲಾಖೆಯವರು ಅಳತೆಮಾಡುತ್ತಲಿದ್ದಾರೆ. ನಮ್ಮ ಹಾಲ್ಮುತ್ತೂರು ಗ್ರಾಮದ ೧೪೫ನಂಬ್ರ ೧೯ ರಲ್ಲೂ ಅಳತೆ ಮಾಡುವುದಾಗಿ ತಿಳಿದುಬಂದಿರುತ್ತೆ. ಇವರು ಅಳತೆ ಮಾಡುವಾಗ ಆ ನಂಬರಿನ ಪಕ್ಕದಲ್ಲಿ ತರಿ ಮತ್ತು ಬಾಗಾಯ್ತು ಜಮೀನುಗಳಿದ್ದರೂ ಸಹಾ ಪೂರ್ಣ ವಿಸ್ತೀರ್ಣವನ್ನು ಅಳತೆ ಮಾಡುತ್ತಲಿದ್ದಾರೆ. ಅಕ್ಕಪಕ್ಕದಲ್ಲಿ ಜಮೀನು ಇರತಕ್ಕ ರೈತರಿಗೆ ಸದರಿ ಪ್ರದೇಶ ವ್ಯವಸಾಯಕ್ಕೆ ಬೇಕಾಗುವ ಸೊಪ್ಪು, ದರಗು, ಜಾನುವಾರು ಮೇವಿಗೂ ಮುಂದೇನು ಗತಿ ಎಂದು ತುಂಬಾ ಕಳವಳವುಂಟಾಗಿರುತ್ತೆ. ಹಿಂದೆ ಶ್ರೀಯುತ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಬಾಗಾಯ್ತು ಜಮೀನು ಒಂದು ಎಕ್ರೆಗೆ ೪ ಎಕ್ರೆ ಸರ್ಕಾರಿ ಜಮೀನನ್ನೂ ತರಿ ೧ ಎಕ್ರೆಗೆ ೨ ಎಕ್ರೆ ಪ್ರದೇಶವನ್ನೂ ಮುಫತ್ತಾಗಿ ರೈತರಿಗೆ ಬಿಡಬೇಕೆಂದು ವಿಧಾನಸಭೆಯಲ್ಲಿ ಪಾಸಿದಿಸಿದ್ದರು. ಈಗಲೂ ಆರೀತಿ ಮಾಡುವುದಾದರೆ ಅಭ್ಯಂತರವಿರುವುದಿಲ್ಲಾ. ಮೇಲ್ಕಂಡ ೧೯ನೇ ಸರ್ವೆನಂಬ್ರದ ಪಕ್ಕದಲ್ಲಿ ನೂರಾ

(೪ನೇ ಪುಟಕ್ಕೆ)

ಸ್ಟೈಪೆಂಡರಿ ಯೋಜನೆ

ಸ್ಟೈಪೆಂಡಿಯರಿ ಯೋಜನೆಯು ೧೯೭೭ ರಿಂದ ಪ್ರಾರಂಭವಾಗಿ ೧೯೮೨ ರವರೆಗೂ ಸ್ಟೈಪೆಂಡಿಯರಿ ಪದವೀಧರರು ಕಾರ್ಯ ನಿರ್ವಹಿಸುತ್ತಾ. ಮುಖ್ಯಮಂತ್ರಿಗಳ ಭರವಸೆಯಂತೆ ಖಾಯಂ ಆಜ್ಞೆ ಹೊರಡುವುದೆಂದು ಬಕಪಕ್ಷಿಗಳಂತೆ ಕಾತರದಿಂದ ನಿರೀಕ್ಷಿಸುತ್ತಿದ್ದಾಗ್ಯೂ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ನಡೆಸುವುದು ಸಮಂಜಸವೆನಿಸುವುದಿಲ್ಲ.

ಸ್ಪರ್ಧಾತ್ಮಕ ಪರೀಕ್ಷೆ ಫಲಿತಾಂಶ ಪ್ರಕಟವಾಗುವವರೆಗೂ ಮಾಜಿ ಮುಖ್ಯಮಂತ್ರಿ, ದಿ|| ದೇವರಾಜ ಅರಸ್‌ರವರು ಪ್ರಾರಂಭಿಸಿದ ಸ್ಟೈಪೆಂಡಿಯರಿ ಯೋಜನೆಯನ್ನು ಮುಕ್ತಾಯಗೊಳಿಸಬಾರದೆಂಬುದಾಗಿ ಶೃಂಗೇರಿ ತಾಲ್ಲೂಕ್ ಸ್ಟೈಪೆಂಡಿಯರಿ ಪದವೀಧರರು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇವೆ.

—ವೈ. ಜಿ. ರವಿಶಂಕರ್, ಅಧ್ಯಕ್ಷ
ಶೃಂಗೇರಿ ತಾಲ್ಲೂಕ್
ಸ್ಟೈಪೆಂಡಿಯರಿ ಸಂಘ.

ಸ್ಪಷ್ಟೀಕರಣ: "ಅಸಂಬದ್ಧ ಪ್ರಲಾಪ"

ಮಾನ್ಯರೆ,

ಕೊಪ್ಪ ತಾ|| ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ನಿಯಮಿತ) ಇವರು ೧೯೮೨ ರ ಬೇಸಿಗೆ ಬೆಳೆಗಾಗಿ ಒದಗಿಸಿದ ಬೀಜದ ಭತ್ತದಿಂದ ರೈತರಿಗೆ ತೊಂದರೆಯಾದ ಬಗ್ಗೆ ಬಂದ ವರದಿಗಳಿಗೆ ಕೃಷಿ ಇಲಾಖೆ ಅಧಿಕಾರಿಗಳೂ, ತಾ ವ್ಯ ಮಾ ಸ ನಿ ದವರೂ ಪತ್ರಿಕೆಗಳಲ್ಲಿ ಕೊಟ್ಟಿರುವ ಸ್ಪಷ್ಟೀಕರಣ ಕೇವಲ ಅಸಂಬದ್ಧವಾಗಿದೆ.

೮೨ ರ ಮುಂಗಾರು ಬೆಳೆಗೆ ತಾನ್ಯಮಾಸನಿ ಮಾರಿದ ಬೀಜದ ಭತ್ತದ ಬಗ್ಗೆ ಯಾರು ಕೇಳಿದ್ದಾರೆ? ಅದಿನ್ನೂ ನೆಟ್ಟಿಯಾಗುವುದರಲ್ಲಿದೆ.

ರೈತರು ಕೇಳುತ್ತಿರುವುದು ಇದು: ೮೨ ರ ಬೇಸಿಗೆ ಬೆಳೆಗೆ—ಅಂದರೆ ಸುಮಾರು ೮೧ ರ ಡಿಸೆಂಬರ್ ಮತ್ತು ೮೨ ರ ಜನವರಿ ತಿಂಗಳುಗಳಲ್ಲಿ— ಸಂಘ ಯಾವ ಭತ್ತವನ್ನು ಬೀಜದ ಭತ್ತವೆಂದು ಮಾರಿತು? ಇದು ಸಂಘಕ್ಕೆ ಎಲ್ಲಿಂದ ಬಂತು? ಎಷ್ಟು ಬಂತು? ಇದನ್ನು ನಂಬಿ ತೆಗೆದುಕೊಂಡುಹೋಗಿ ಬಿತ್ತಿದವರು, ಮಳೆ ಹಿಡಿಯುವ ಹೊತ್ತಿಗೆ ಹಾಲು ತುಂಬಲು ತಯಾರಿ ನಡೆಸಿದ್ದ ಈ ತೆನೆಯಿಂದ ಮಂಗಗಳಾದದ್ದು ಸುಳ್ಳೆ?

ರೈತರು ನಷ್ಟನಾಯಿತು ಅಂತ ಬೊಬ್ಬೆ ಹೊಡೆಯುತ್ತಿರುವಾಗ, 'ನಾವು ಜವಾಬ್ದಾರರಲ್ಲ', 'ಛೆ! ಛೆ! ನಾವಂತೂ ಖಂಡಿತ ಅಲ್ಲ' ಅಂತ ಜಾರಿಕೊಳ್ಳಲು ಪ್ರಯತ್ನಿಸುವುದನ್ನು ಬಿಟ್ಟು, ನಿಜವಾಗಿ ಹೀಗೆ ನಡೆದದ್ದು ಹೌದೆ, ನಷ್ಟವಾಗಿದ್ದರೆ ತುಂಬಿಕೊಡಲು ದಾರಿಗಳಿವೆಯೆ ಎಂಬ ದಿಕ್ಕಿನಲ್ಲಿ ಯೋಚಿಸಲು ನಮ್ಮ ರಾಜಕಾರಣಿಗಳೂ, ಅಧಿಕಾರಿಗಳೂ ಮನಸ್ಸು ಮಾಡಿಯಾರೆ?

—ಹೆ. ಸುಂದರ ರಾವ್, ಕೊಪ್ಪ.

ಬಡವರಿಗೆ ಸಾಲ ಕೊಡದೆ ತಾತ್ಸಾರ

(೧ನೇ ಪುಟದಿಂದ)

ತಹಸೀಲ್ದಾರ್ ಕಚೇರಿಗೆ ಹೋಗಿ ಶುಲ್ಕ ಮತ್ತು 'ದಕ್ಷಿಣೆ' ವಗೈರೆ ೧೦೦ರೂ. ಗೂ ಹೆಚ್ಚು ಖರ್ಚುಮಾಡಿ; ಕರಿಮನೆ ಭೂ ಅಭಿವೃದ್ಧಿ ಬ್ಯಾಂಕಿನ ಕಂತು ಕಟ್ಟಿ ಚುಕ್ತಾ ಸರ್ಟಿಫಿಕೇಟು ಪಡೆದು, ಇತರೆಲ್ಲ ದಾಖಲಾತಿಗಳನ್ನು ಬ್ಯಾಂಕಿಗೆ ಒದಗಿಸಿದಾಗ ಮೇ ೨೪ರಂದು ಬರಲು ತಿಳಿಸಿದರು. ಅಂದು ತಂದೆಯೊಡನೆ ಹೋದರೆ ಪುನಃ ಜೂನ್ ೨ರಂದು ಜಾಮೀನುದಾರರೊಂಗೆ ಬರಲು ಹೇಳಿದರು. ಅಲ್ಲದೆ ಸಾಲಗಾರ ಹಾಗೂ ಜಾಮೀನುದಾರರಿಬ್ಬರೂ ಕನಿಷ್ಠ ೫೦ ರೂ.ಗಳ ಖಾತೆ ತೆರೆಯುವುದಲ್ಲದೆ ಇನ್ನೂ ೧೨ ಜನರದಾದರೂ ಖಾತೆ ತೆರೆಯಿಸಬೇಕೆಂದು ಹೇಳಿದರು ಎಂದೂ ಶೇಷಯ್ಯ ತಿಳಿಸಿದ್ದಾರೆ.

ಪುನಃ ಜೂನ್ ೨೬ಂದು ಎಲ್ಲರೂ ಹೋದರೆ, "ಈಗ ಆಗುವುದಿಲ್ಲ ಮುಂದಿನ ತಿಂಗಳು ಖಂಡಿತ ಕೊಡಿಸುತ್ತೇನೆ. ಮಾತ್ರ ಒಂದೇ ಸಾವಿರ" ಎಂದರು. ಅದಕ್ಕೂ ಒಪ್ಪಿದ್ದಾಯಿತು. ಖಾತೆ ತೆರೆಯಲು ಆಗಲೇ ೨೫ ರೂ. ಕಟ್ಟಿಸಿಕೊಂಡರು ಎಂದಿರುವ ಶೇಷಯ್ಯ ಪುನಃ ಹೋದಾಗ 'ಈ ವರ್ಷಕ್ಕೆ ಹಣ ಕೊಡಲು ಸಾಧ್ಯವಿಲ್ಲ' ಎಂದು ಬಿಟ್ಟರು ಎಂದಿದ್ದಾರೆ. ಅನಂತರ ತಕ್ಷಣ ದಾಖಲಾತಿಗಳನ್ನೆಲ್ಲ ಒಪರೇಕಟ್ಟೆ ಸಿಂಡಿಕೇಟ್ ಬ್ಯಾಂಕಿಗೆ ಒಯ್ದು ಮ್ಯಾನೇಜರ್ ಹತ್ರ ಮಾತಾಡಿದಾಗ, "ಗಿರಿಜನರಲ್ಲವಾ, ಲೋನು ಕೊಡುವ" ಎಂದು ಹೇಳಿ, ಎಲ್ಲ ರಿಕಾರ್ಡು ಮಾಡಿಸಿದರು. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅಡವು ಮಾಡಿಸಿಕೊಂಡು ಹೋಗಿ ಕೊಟ್ಟ ಕೂಡಲೇ ೧,೫೦೦ರೂ. ನಗದು ನೀಡಿ, ಉಳಿದ ಹಣವನ್ನು ಗೊಬ್ಬರ ಕೊಳ್ಳಲು ತಿಳಿಸಿ, ಕೊಂಡ ರಸೀದಿಯ ಮೇಲೆ ಮಂಜೂರು ಮಾಡಿದರು ಎಂದು ಹೇಳಿದ್ದಾರೆ.

ಅರವತ್ತು ವಯಸ್ಸು ಮೀರಿರುವ ವ್ಯಕ್ತಿಯನ್ನು ಹತ್ತಾರು ಮೈಲು ನಾಲ್ಕು ಸಾರಿ ಓಡಾಡಿಸಿದ್ದು, ಸುಮಾರು ೨೦೦ರೂ. ನಷ್ಟ ಸಾಲಸೋಲ ಮಾಡಿ ದಾಖಲಾತಿಗಳನ್ನೆಲ್ಲ ತರಿಸಿದ್ದು, ಅಗತ್ಯವಿರುವುದಕ್ಕಿಂತ ಎಷ್ಟೋ ಪಟ್ಟ ಕಡಿಮೆ ಹಣವನ್ನು – ಜೇಬಿನಿಂದ ಭಿಕ್ಷೆ ನೀಡುವಂತೆ–ಕೊಡುತ್ತೇನೆಂದದ್ದು– ಇಷ್ಟೂ ಸಾಲದೆ ಕೊನೆಯಲ್ಲಿ ಯಾವ ಅಸುಕೂ ಇಲ್ಲದೆ ಕೈಯೆತ್ತಿದ್ದು ಇದೆಲ್ಲ ಬಹಳ ಅಮಾನುಷ ಎಂದಿರುವ ಈ ಗಿರಿಜನ ಮುಖಂಡ, "ಆರು ಎಕರೆ ಜಮೀನಿದ್ದು, ಅಷ್ಟಿಷ್ಟು ವಿದ್ಯಾವಂತನೂ, ವ್ಯವಹಾರ ಬಲ್ಲವನೂ ಆದಂಥವನಿಗೇ ಸಾಲ ಕೊಡದೆ ಇಷ್ಟೆಲ್ಲ ಸತಾಯಿಸಿದ ಈ ಅಧಿಕಾರಿಯನ್ನು ಬಡವರು ನಂಬಿ ಉದ್ಧಾರವಾಗಬಹುದೆ?" ಎಂದು ಕೇಳುತ್ತಾರೆ. ತಮ್ಮ ಇಷ್ಟು ಸಣ್ಣ ಅವಶ್ಯಕತೆಗೆ ಕೂಡ ಹತ್ತಿರದ ಈ ಬ್ಯಾಂಕನ್ನು ಬಿಟ್ಟು ದೂರದ ಬಸರೀಕಟ್ಟೆಗೆ ಅಲೆಯುವಂತಾದರೆ ಬಡವರ ಪಾಲಿಗೆ ಇದು ಹತ್ತಿರದಲ್ಲಿ ಇದ್ದೇನು ಪ್ರಯೋಜನ ಎಂದೂ ಅವರ ಪ್ರಶ್ನೆ.

ಹರಿಜನರಿಗೆ ನೀರಾವರಿ ಬೋರ್‌ವೆಲ್ ಮಂಜೂರು

ಕೊಪ್ಪ: ಸ್ಪೆಶಲ್ ಕಾಂಪೊನೆಂಟ್ ಸ್ಕೀಮಿನಲ್ಲಿ ತಾಲೂಕಿನ ಮೂವರು ಹರಿಜನರಿಗೆ ತಲಾ ೬೫ ಸಾವಿರ ರೂ. ವೆಚ್ಚದಲ್ಲಿ ನೀರಾವರಿ ಬೋರ್‌ವೆಲ್ ಒದಗಿಸಲು ಮಂಜೂರಾತಿ ದೊರೆತಿದೆ. ಇದರಲ್ಲಿ ಕಾಲುಭಾಗ ಸಾಲ ರೂಪದಲ್ಲಿಯೂ ಮುಕ್ಕಾಲು ಭಾಗ ಸಹಾಯಧನವಾಗಿಯೂ ಕೊಡಲಾಗುತ್ತದೆ. ಇದರ ಪ್ರಯೋಜನಪಡೆವರನ್ನು ಅಡಿಗೆಬೈಲು ಮತ್ತು ಹಿರೇಗದ್ದೆ ಗ್ರಾಮಗಳಿಂದ ಆರಿಸಬೇಕಾಗಿದ್ದು ಇನ್ನೂ ಆಯ್ಕೆ ಆಗಿಲ್ಲ.

ಗಿರಿಜನರಿಗಾಗಿ ಹುಡ್ಕೊ ಯೋಜನೆಯಲ್ಲಿ ೫೦ ಮನೆಗಳು ಮಂಜೂರಾಗಿವೆ.

ರೈತರ ಉಚ್ಚಾಟನೆಯೆ?

(೨ನೇ ಪುಟದಿಂದ)

ರು ಎಕ್ರೆ ತರಿ ಮತ್ತು ಬಾಗಾಯ್ತು ಜಮೀನು ಇರುತ್ತೆ. ಸಂಪೂರ್ಣ ಆಳತೆ ಮಾಡಿ ಕಾಡು ಬೆಳೆಸುವಲ್ಲಿ ನೂರಾರು ರೈತ ಮನೆ ಮಂದಿ ಊರು ಬಿಡಬೇಕಾಗುತ್ತೆ. ಈ ವಿಚಾರವನ್ನು ಮಲೆನಾಡಿನ ನಮ್ಮ ನಾಯಕರುಗಳು ಗಮನಕ್ಕೆ ತಂದುಕೊಂಡು ಬಡ ರೈತರಿಗೆ ಈ ತೊಂದ್ರೆಯನ್ನು ತಪ್ಪಿಸುವರೆ?

–ಬಡ ರೈತರು, ಹಾಲ್ಮುತ್ತೂರು.

ಕೋರ್ಟ್ ಫೀ ಸ್ಟ್ಯಾಂಪ್ ದರ ಈಗ ಹೆಚ್ಚಿದೆ

ಕೊಪ್ಪ: ದಿನಾಂಕ ೧-೪-೮೨ ಕರ್ನಾಟಕ ರಾಜ್ಯಪತ್ರದ ನೋಟಿಫಿಕೇಶನ್ ನಂ ಪೈ ಎಲ್ ಎ ಡಬ್ಲ್ಯು ೨೧ ಎಲ್ ಜಿ ಎನ್ ೮೨ ದಿನಾಂಕ ೧-೪-೮೨ರ ಪ್ರಕಾರ ವಿವಿಧ ಅರ್ಜಿಗಳಿಗೆ ಲಗತ್ತಿಸಬೇಕಾದ ಕೋರ್ಟ್ ಫೀ ಸ್ಟ್ಯಾಂಪಿನ ದರವನ್ನು ಈ ಕೆಳಗಿನಂತೆ ಹೆಚ್ಚಿಸಲಾಗಿದೆ.

ಸಾದಾ ಅರ್ಜಿಗಳು: ಹಿಂದೆ ಇದ್ದ ೨೫ ಪೈಸೆಗೆ ಬದಲಾಗಿ ಎಪ್ರಿಲ್ ೧ರಿಂದ ೧ರೂ; ದರಖಾಸ್ತು ಅರ್ಜಿಗಳು: ೧ರೂ. ಇದ್ದದ್ದು ಈಗ ೨ರೂ.; ಎಲಿನೇಶನ್ ಅರ್ಜಿಗಳು: ೪ ರೂ. ಇದ್ದದ್ದು ೧೦ರೂ.

ಈ ತಿದ್ದುಪಡಿ ದಿನಾಂಕ ೧-೪-೮೨ರಿಂದ ಜಾರಿಗೆ ಬಂದಿರುವುದಾಗಿ ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ತಿಳಿಸಿದ್ದಾರೆ.

ಸ್ಕೌಟ್ಸ್ ಸಂಘಟನಾ ಕಮಿಶನರ್‌ರಿಗೆ ಸನ್ಮಾನ

ಶೃಂಗೇರಿ: ೫ನೇ ಸ್ಕೌಟಿಂಗ್ ವರ್ಷಾಚರಣೆಯ ಸಂದರ್ಭದಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ರಾಜ್ಯ ಸಹ ಸಂಘಟನಾ ಕಮಿಶನರಾದ ಎ. ರಾಜಗೋಪಾಲ್ ರಾವ್ ಅವರನ್ನು ಇಲ್ಲಿ ಈಚೆಗೆ ಸನ್ಮಾನಿಸಲಾಯಿತು.

ಶೃಂಗೇರಿ ಪ್ರೌಢಶಾಲಾ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಪ್ರೌಢಶಾಲಾ ಮುಖ್ಯೋಪಾಧ್ಯಾಯ ಅನಂತ ಭಟ್ ವಹಿಸಿದ್ದರು. ಸಹ ವಿದ್ಯಾಧಿಕಾರಿಗಳೂ ಸಹ ಜಿಲ್ಲಾ ಕಮಿಶನರರೂ(ಸ್ಕೌಟ್ಸ್) ಆದ ಭೀಮಪ್ಪ ಮುಖ್ಯ ಅತಿಥಿಗಳಾಗಿದ್ದರು.

ಕೊಪ್ಪದಲ್ಲಿ

ಕಿರಿಯ ಕಾಲೇಜಿನ ಸ್ಕೌಟ್ಸ್‌ದಳ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನುದ್ದೇಶಿಸಿ ರಾಜಗೋಪಾಲ್ ರಾವ್ ಈಚೆಗೆ ಮಾತಾಡುತ್ತ ಸ್ಕೌಟಿಂಗನಲ್ಲಿ ಆಧ್ಯಾತ್ಮಿಕತೆಗೆ ಕೊಟ್ಟಿರುವ ಮಹತ್ವ ವಿವರಿಸಿದರು.

ವನಮಹೋತ್ಸವ

ಕೊಪ್ಪ: ಇಲ್ಲಿನ ಕೃಷಿ ಸಮಾಚಾರ ನಿಧಿ ಮಯ ಕೇಂದ್ರ ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳ ಆಶ್ರಯದಲ್ಲಿ ವನಮಹೋತ್ಸವವನ್ನು ಜು. ೧೯ರಂದು ಪುರಭವನದಲ್ಲಿ ಏರ್ಪಡಿಸಲಾಗಿತ್ತು. ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಹೆಚ್.ಎಂ. ಸುರೇಶ್ ತಮ್ಮ ಸ್ವಾಗತ ಭಾಷಣದಲ್ಲಿ, ಕಾಡು ಬೆಳೆಸುವ ಬಗ್ಗೆ ಸಿಂಡಿಕೇಟ್ ಬ್ಯಾಂಕಿನ ಆರ್ಥಿಕ ಯೋಜನೆಗಳನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿದ್ದ ವಿಭಾಗ ಅರಣ್ಯಾಧಿಕಾರಿ ಸುಂದರ ನಾಯ್ಕರು ಅರಣ್ಯದ ಸಂರಕ್ಷಣೆ ಮತ್ತು ಮರನೆಡುವ ಅಗತ್ಯವನ್ನು ಒತ್ತಿ ಹೇಳಿದರು. ಅರಣ್ಯ ಬೆಳೆಸುವ ಕೆಲಸ ಮಾಡದೇ ಇದೇ ರೀತಿ ಮರಗಳನ್ನು ಕಡಿಯುತ್ತಾ ಹೋದರೆ ಮುಂದಿನ ಜನಾಂಗ ಎದುರಿಸಬೇಕಾಗುವ ಪರಿಣಾಮಗಳನ್ನು ಕುರಿತು ಎ.ಸಿ.ಎಫ್. ರವರಾದ ಎನ್. ಡಿ. ತಿವಾರಿ ಎಚ್ಚರಿಸಿದರು. ತಹಸೀಲ್ದಾರ್ ಹೆಚ್.ಎಂ. ನಾಗಪ್ಪ ಅವರೂ ಮಾತನಾಡಿದರು.

ಹೆಚ್.ಜಿ. ಗೋವಿಂದಗೌಡರು ಅಧ್ಯಕ್ಷತೆ ವಹಿಸಿದ್ದರು. ಕಾಡು ಬೆಳೆಸುವುದನ್ನು ತೀವ್ರಗೊಳಿಸುವ ಕ್ರಮಗಳ ಬಗ್ಗೆ ವಿಪುಲ ಚರ್ಚೆ ನಡೆಯಿತು. ಡಿ. ನಾಗರಾಜ್ ವಂದನಾರ್ಪಣೆ ಮಾಡಿದರು.

ಹಲಸು, ಹುಣಿಸೆ, ಕುಬಾಬುಲ್, ಗುಲ್‌ಮೊಹರ್ ಮುಂತಾದ ಉಪಯುಕ್ತ ಜಾತಿಯ ಸುಮಾರು ೨,೦೦೦ ಸಸಿಗಳನ್ನು ಪುರಭವನದ ಆವರಣದಲ್ಲಿ ನೆಡಲಾಯಿತು.

ಗ್ರಾಮಾಂತರ ರಸ್ತೆಗೆ ೮.೨೫ ಲಕ್ಷ ರೂ. ಮಂಜೂರು

ಕೊಪ್ಪ: ಅತ್ತಿಕೊಡಿಗೆ ಗ್ರಾಮಪಂಚಾಯ್ತಿಗೆ ಸೇರಿದ, ಗಿರಿಜನರೇ ಹೆಚ್ಚಾಗಿ ವಾಸಿಸುವ ಮೆಣಸಿನ ಹಾಡ್ಯಕ್ಕೆ ಕಲ್ಲುಗುಡ್ಡೆಯಿಂದ ೬ಕಿ.ಮೀ ದೂರ ಟಾರುರಸ್ತೆ ನಿರ್ಮಿಸಲು ೮.೫ ಲಕ್ಷ ರೂ.. ಮಂಜೂರಾಗಿದೆ. ತೀರ ದುರ್ಗಮವಾದ ಈ ಪ್ರದೇಶದಲ್ಲಿ ಈ ರಸ್ತೆಯ ನಿರ್ಮಾಣದಿಂದ ಬಹಳ ಕಾಲದ ಅವಶ್ಯಕತೆಯೊಂದರ ಪೂರೈಕೆಯಾದಂತಾಗುತ್ತದೆ.

ನ್ಯಾಯಾಲಯಕ್ಕೆ ಕಟ್ಟಡ ಕೊಡಲು ಕೊಪ್ಪ ತಾ.ಅ.ಮಂ. ನಿರ್ಧಾರ

ಕೊಪ್ಪ: ಪ್ರತಿ ತಾಲ್ಲೂಕಿಗೊಂದು ಪ್ರಥಮ ದರ್ಜೆ ನ್ಯಾಯಾಲಯ ಸ್ಥಾಪಿಸುವ ರಾಜ್ಯ ಸರ್ಕಾರದ ತೀರ್ಮಾನದಂತೆ ಕೊಪ್ಪದಲ್ಲಿ ಇದಕ್ಕಾಗಿ ತಾ॥ಅ॥ ಮಂಡಳಿಗೆ ಸೇರಿದ ಕಟ್ಟಡವೊಂದನ್ನು ಬಿಟ್ಟು ಕೊಡಲು ಜು. ೨೪ ರಂದು ನಡೆದ ಮಂಡಳಿಯ ಸಭೆ ತೀರ್ಮಾನಿಸಿದೆ.

ನ್ಯಾಯಾಲಯ ಸ್ಥಾಪನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿರುವ ಮಂಡಳಿ ಸದಸ್ಯರು, ಇದರಿಂದ ಜನರ ಬಹಳ ಕಾಲದ ಅಗತ್ಯವೊಂದು ಪೂರೈಸಿದಂತಾಗುತ್ತದೆಂದಿದ್ದಾರೆ.

ಅಂಗನವಾಡಿ

ತಾಲ್ಲೂಕಿಗೆ ಸುಮಾರು ೧೨ ಲಕ್ಷ ರೂ. ವೆಚ್ಚದಲ್ಲಿ ಮಂಜೂರಾಗಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಯಾದ ಅಂಗನವಾಡಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಲು ಮಂಡಳಿ ತೀರ್ಮಾನಿಸಿದೆ ಹಾಗೂ ಮಂಜೂರು ಮಾಡಿದ್ದಕ್ಕಾಗಿ ಮಂತ್ರಿಗಳಿಗೆ ವಂದನೆ ಸಲ್ಲಿಸಿದೆ.

ಕುದ್ರೆಗುಂಡಿ ಪ್ರೌಢಶಾಲೆ ಕಟ್ಟಡಕ್ಕೆ ಶಂಕುಸ್ಥಾಪನೆ

ಕುದ್ರೆಗುಂಡಿ: ಇಲ್ಲಿನ ಸರ್ಕಾರಿ ಪ್ರೌಢಶಾಲೆಯ ಕಟ್ಟಡದ ಶಂಕುಸ್ಥಾಪನೆಯನ್ನು ಸೀತೂರಿನ ವಯೋವೃದ್ಧರಿಂದ ಗಣಪತಿ ಉಪಾಧ್ಯರು ಜುಲೈ ೨೪ರಂದು ನೆರವೇರಿಸಿದರು. ಈ ಸರಳ ಸಮಾರಂಭದ ಅಧ್ಯಕ್ಷತೆಯನ್ನು ತಲಮಕ್ಕಿ ಪಂಚಾಯ್ತಿ ಅಧ್ಯಕ್ಷ ಪಿ. ಜಿ. ಗುರ್ಜರ್ ವಹಿಸಿದ್ದರು.

೬ ಕೊಠಡಿಗಳ ಈ ಕಟ್ಟಡಕ್ಕಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿ ೨ ಲಕ್ಷ ೧೫ ಸಾವಿರ ರೂ. ಮಂಜೂರಾದೆ. ಶಾಲಾ ಕಟ್ಟಡಕ್ಕಾಗಿ ಈ ಯೋಜನೆಯಲ್ಲಿ ಇಷ್ಟೊಂದು ದೊಡ್ಡ ಮೊತ್ತವನ್ನು ಒದಗಿಸಿರುವುದು ಇಡೀ ಜಿಲ್ಲೆಯಲ್ಲಿ ಇದೇ ಮತ್ತು ಮುತ್ತಿನಕೊಪ್ಪ ಶಾಲೆಗೆ ಮಾತ್ರ ಎಂದು ತಿಳಿದುಬಂದಿದೆ.

ಸಂಪಾದಕ, ಪ್ರಕಾಶಕ, ಹಾಗೂ ಮುದ್ರಕ
ಸಿರಿಮನೆ ನಾಗರಾಜ್.
ಅಚ್ಚು: ನೇಸರ ಮುದ್ರಣ, ಕೊಪ್ಪ.